# ಗೇರು ಸಂಶೋಧನಾ ನಿರ್ದೇಶನಾಲಯದ ಹೊಸ ತಳಿ ಹೆಚ್-130 ಯ ಲೈಸೆನ್ಸ್ ಕೊಡುವಿಕೆ



ಪುತ್ತೂರು: ಐ.ಸಿ.ಎ.ಆರ್ - ಗೇರು ಸಂಶೋಧನಾ ನಿರ್ದೇಶನಾಲಯ ಪುತ್ತೂರು ಅಭಿವೃದ್ಧಿಪಡಿಸಿರುವ ಹೊಸ ಗೇರು ತಳಿ ಹೆಚ್-130 ಯನ್ನು ಉತ್ಪಾದನೆ ಮಾಡಿ ರೈತರಿಗೆ ತಲುಪಿಸುವ ಸಲುವಾಗಿ ತಮಿಳುನಾಡಿನ ಅಣ್ಣೈ ವೆಲ್ಲಾಂಕಣಿ ನರ್ಸರಿಯ ಜೊತೆಗೆ ಲೈಸೆನ್ಸಿಂಗ್ ಒಪ್ಪಂದವನ್ನು ಬುಧವಾರ ಮಾಡಲಾಯಿತು. ಐ.ಸಿ.ಎ.ಆರ್ - ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು ಇದರ ನಿರ್ದೇಶಕರಾದ ಡಾ. ಎಂ. ಜಿ. ನಾಯಕ್ ಮತ್ತು ನರ್ಸರಿ ಮಾಲೀಕರಾದ ಡಿ. ಕ್ಸೇವಿಯರ್ ಒಪ್ಪಂದಕ್ಕೆ ಸಹಿ ಹಾಕಿದರು. ಈ ಸಂಧರ್ಭ ಮಾತನಾಡಿದ ಡಾ. ಎಂ. ಜಿ. ನಾಯಕ್‌ರವರು ಹೆಚ್-130 ತಳಿಯು ತಳಿ ಸಂರಕ್ಷಣೆ ಮತ್ತು ರೈತರ ಹಕ್ಕು ಕಾಯ್ದೆ (PPV&FRA)-2001ರ ಅಡಿಯಲ್ಲಿ ಹಕ್ಕುಸ್ವಾಮ್ಯವನ್ನು ಪಡೆದಿದ್ದು ಕಾನೂನಾತ್ಮಕ ರಕ್ಷಣೆಯನ್ನು ಪಡೆದಿದೆ.2001ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಸಸ್ಯ ತಳಿ ಸಂರಕ್ಷಣೆ ಹಾಗೂ ರೈತ ತಳಿ ಹಕ್ಕುಗಳ ಕಾಯಿದೆ ಪ್ರಕಾರ ಯಾವುದೇ ಹೊಸ ಸಸ್ಯ ತಳಿಯನ್ನು ಅಭಿವೃದ್ಧಿಪಡಿಸಿ ಅದನ್ನು ಸಸ್ಯ ತಳಿ ಸಂರಕ್ಷಣೆ ಹಾಗೂ ರೈತ ತಳಿ ಹಕ್ಕುಗಳ ಪ್ರಾಧಿಕಾರದಲ್ಲಿ ನೋಂದಣಿ ಮಾಡಿದಲ್ಲಿ ಅದರ ಹಕ್ಕುಸ್ವಾಮ್ಯ ಆ ತಳಿಯನ್ನು ಅಭಿವೃದ್ಧಿಪಡಿಸಿದವರದ್ದೇ ಆಗಿರುತ್ತದೆ. ಇತರರು ಅದನ್ನು ಅನುಮತಿ ಪಡೆಯದೆ ದುರುಪಯೋಗ ಮಾಡುವಂತಿಲ್ಲ ಅಥವಾ ಅದರಿಂದ ಲಾಭ ಪಡೆಯುವಂತಿಲ್ಲ, ಒಂದು ವೇಳೆ ಆ ರೀತಿಯ ದುರುಪಯೋಗ ಕಂಡುಬಂದರೆ ಅದು ಕಾನೂನಿನ ಪ್ರಕಾರ ಅಪರಾಧ. ಆದರೆ ಈಗಾಗಲೇ ಕೆಲವು ನರ್ಸರಿಯವರು ಈ ತಳಿಯ ಸಸಿಗಳನ್ನು ಉತ್ಪಾದಿಸಿ ಬೇರೆ ಹೆಸರಿನಲ್ಲಿ, ಬೇರೆಯವರಿಂದ ಕಸಿಕಡ್ಡಿಗಳನ್ನು ಪಡೆದು ಉತ್ಪಾದಿಸಿ ಹಂಚಿರುವುದು ಸಂಸ್ಥೆಯ ಗಮನಕ್ಕೆ ಬಂದಿರುತ್ತದೆ. ಇದು ಮುಂದುವರಿಯಬಾರದು ಹಾಗೂ ಮುಂದುವರೆದರೆ ಸಂಬಂಧಪಟ್ಟವರು ತೊಂದರೆ ಅನುಭವಿಸುತ್ತಾರೆ. ಅದಕ್ಕೆ ಸಂಸ್ಥೆ ಜವಾಬ್ದಾರಿಯಾಗಿರುವುದಿಲ್ಲ, ಸಂಸ್ಥೆ ಯಾವುದೇ ತಳಿಯ ಅಭಿವೃದ್ಧಿಯನ್ನು ಬರೀ ಖಾಸಗೀ ನರ್ಸರಿಗಳ ಉಪಯೋಗಕ್ಕಾಗಿ ಮಾಡುತ್ತಿಲ್ಲ, ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಇದರ ಮೂಲಕ ದೇಶದ ಅಭಿವೃದ್ಧಿ ಸಾಧ್ಯ ಎಂಬುದು ಸಂಸ್ಥೆಯ ಆಶಯ ಎಂದರು. ಗೇರು ಕೃಷಿಕರು ಹೆಚ್-130 ತಳಿಯ ಕಸಿ ಗಿಡಗಳನ್ನು ಸಂಸ್ಥೆಯಿಂದ ಅಧಿಕೃತ ಮಾನ್ಯತೆ ಪಡೆದಿರುವ ನರ್ಸರಿಗಳಲ್ಲಿ ಮಾತ್ರ ಪಡೆಯುವಂತೆ ಮನವಿ ಮಾಡಿದರು. ಹೆಚ್-130 ತಳಿಯ ಕಸಿ ಗಿಡಗಳನ್ನು ಉತ್ಪಾದಿಸುವ ಅನುಮತಿಗಾಗಿ ಆಸಕ್ತ ನರ್ಸರಿಗಳು ನಿರ್ದೇಶಕರು, ಐ.ಸಿ.ಎ.ಆರ್-ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು ಇಲ್ಲಿ ಸಂಪರ್ಕಿಸಬಹುದುಎಂದರು. ಈ ಸಂದರ್ಭದಲ್ಲಿ ಸಂಸ್ಥೆಯ ವಿಜ್ಞಾನಿಗಳಾದ ಡಾ. ಮೋಹನ್ ಜೆ.ಎಸ್., ಡಾ. ಶಂಸುದ್ದೀನ್ ಮಂಗಳಶ್ಶೇರಿ, ಡಾ. ಸಿದ್ದಣ್ಣ ಸವದಿ ಉಪಸ್ಥಿತರಿದ್ದರು.